# ಶರಣೆಯರು ಮೆಚ್ಚಿದ ಅಣ್ಣ ಬಸವಣ್ಣ



ಸಬಿತಾ ಬನ್ನಾಡಿ

ಅನುಭವ ಮಂಟಪದಲ್ಲಿ ಶರಣೆಯರಿಗೆ ನೀಡಿದ ಮುಕ್ತ ಅವಕಾಶ ಮಹಿಳೆಯರಿಗೆ ಸಂದ ದೊಡ್ಡ ಕೊಡುಗೆ ಎಂಬುದೊಂದು ಮಾತಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಅದಕ್ಕಾಗಿ ಶರಣೆಯರು ಮುಖ್ಯವಾಗಿ ಬಸವಣ್ಣನಿಗೆ ತಮ್ಮ ಕೃತಜ್ಞತೆಯನ್ನು ವಚನಗಳಲ್ಲಿ ಸಮರ್ಪಿಸಿದ್ದಾರೆ. ಆದರೆ ಇದರೊಂದಿಗೆ ಇನ್ನೊಂದು ಸತ್ಯವನ್ನೂ ನಾವು ದಾಖಲಿಸಬೇಕಾಗಿದೆ. ಶರಣೆಯರು ಎಷ್ಟು ಪಡೆದುಕೊಂಡರೋ ಅಷ್ಟೇ ಕೊಡುಗೆಯನ್ನು ಕೊಟ್ಟಿದ್ದಾರೆ ಕೂಡ. ಶರಣೆಯರು ತಮ್ಮ ಅವಕಾಶವನ್ನು ಎಷ್ಟು ಚೆನ್ನಾಗಿ ಬಳಸಿಕೊಂಡರೆಂದರೆ, ಶರಣ ಚಿಂತನೆಯನ್ನು ಅತ್ಯಂತ ಖಚಿತವಾಗಿ ಅರಿತುಕೊಂಡು, ಅದರಂತೆ ನಡೆಯದ ಶರಣರನ್ನು ನೇರವಾಗಿ ಟೀಕಿಸಿದ್ದಾರೆ, ವಿಡಂಬಿಸಿದ್ದಾರೆ. ಇಷ್ಟಾಗಿ ಬಹಳ ಮೆಚ್ಚಿಕೊಳ್ಳಬಹುದಾದ ಸಂಗತಿ ಎಂದರೆ, ಶರಣರು ಅವರ ಈ ಟೀಕೆಗಳಿಗೆ ಎದುರು ಮಾತಾಡಿಲ್ಲ. ಹಾಗೆ ಎದುರು ಮಾತಾಡಿರುವ ವಚನಗಳು ಸಿಗುವುದಿಲ್ಲ. ಬದಲಿಗೆ ಅವರೂ ಕೂಡಾ ಶರಣೆಯರ ಮಾತುಗಳನ್ನು ಒಪ್ಪಿ ಮುನ್ನಡೆದಿದ್ದಾರೆ. ಹಾಗಾದರೆ ಈ ಮಾತುಗಳೆಲ್ಲ ಕೇವಲ ಶರಣೆಯರದು ಮಾತ್ರವೇ? ಜೇಡರ ದಾಸಿಮಯ್ಯನೇ 'ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂದಿಲ್ಲವೇ? ಎಂಬ ಮಾತೂ ಬಂದೀತು. ಶರಣ ಚಳವಳಿಯು ಎಲ್ಲಾ ರೀತಿಯ ತಾರತಮ್ಯವನ್ನು ನಿರಾಕರಿಸುವ ನೆಲೆಯನ್ನು ಹೊಂದಿದೆ. ಆದರೆ ಹೆಣ್ಣು ಗಂಡಿನ ತಾರತಮ್ಯ ನಿವಾರಣೆಯಲ್ಲಿ ಹಲವರಿಗೆ ಗೊಂದಲಗಳು ಇದ್ದವು. ಅವರು ದಿನವೂ ಬಳಸುವ ಭಾಷೆಯಲ್ಲಿ ಅವರ ಆಶಯಕ್ಕೆ ವಿರುದ್ಧವಾದ ನಡೆಗಳಿದ್ದವು. ಇದೆಲ್ಲವನ್ನೂ ಅವರಿಗೆ ಮನಗಾಣಿಸುವ ಕೆಲಸವನ್ನು ಶರಣೆಯರು ಮಾಡಿದ್ದಾರೆ. 'ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು / ಅಲ್ಲದಡೆ ತೊಲಗು ತಾಯೆ!' ಎಂದು ಅಲ್ಲಮನೆಂದಾಗ ಆ ಕುರುಹಿನ ಅವಶ್ಯಕತೆಯನ್ನು ಅಕ್ಕಮಹಾದೇವಿ ನಿರಾಕರಿಸಿದಳು ಮತ್ತು ಅನುಭವ ಮಂಟಪಕ್ಕೆ ಪತಿಯಿಲ್ಲದೆ ಪ್ರವೇಶ ಪಡೆದಳು ಎನ್ನುವುದು ಹೇಗೆ ಶರಣೆಯರು ತಮ್ಮ ಚಿಂತನೆಯ ಮೂಲಕ ಶರಣರ ಚಿಂತನೆಯನ್ನೂ ಪ್ರಭಾವಿಸಿದರು ಎಂಬುದನ್ನು ಒಡೆದು ಕಾಣಿಸುತ್ತದೆ. ಇಲ್ಲಿ ನಿಜವಾದ ಅರ್ಥದಲ್ಲಿ ಕೊಳು ಕೊಡೆಗಳಾಗಿವೆ. ಯಾವ ಅಕ್ಕನನ್ನು ಗಂಡುಳ್ಳ ಸತಿಯಲ್ಲ ಎಂದು ನಿರಾಕರಿಸಲಾಗಿತ್ತೋ ಅದೇ ಅಕ್ಕನನ್ನು–

**ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು**
**ವಚನ / ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ**
**ಹತ್ತು ವಚನ / ಪ್ರಭುದೇವರ ಹತ್ತು ವಚನಕ್ಕೆ**
**ಅಜಗಣ್ಣನ ಐದು ವಚನ / ಅಜಗಣ್ಣನ ಐದು ವಚನಕ್ಕೆ**
**ಕೂಡಲ ಚೆನ್ನಸಂಗಮದೇವಾ / ಮಹದೇವಿಯಕ್ಕನ**
**ಒಂದು ವಚನ ನಿರ್ವಚನ**